## ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕುಮಕನೂರು ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಸ್ತಾವನೆಗೆ ಉತ್ತರ

**ಪ್ರಸ್ತಾವನೆ:**

ಸ್ವಾತಂತ್ರ್ಯದ ಬಳಿಕ ದಕ್ಷಿಣ ಭಾರತದಲ್ಲಿ ಮೊಟ್ಟಮೊದಲು ಪ್ರಾರಂಭವಾದ ಗುಲಬರ್ಗಾ ದೂರದರ್ಶನ ಕೇಂದ್ರವನ್ನು ಕೇಂದ್ರ ಸರ್ಕಾರ ಬಂದ್ ಮಾಡಲು ಹೊರಟಿರುವ ಬಗ್ಗೆ, ದಿನಾಂಕ:04-08-2025ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ದೆಹಲಿಯಿಂದ ಮೊದಲುಗೊಂಡು ದಕ್ಷಿಣ ಭಾರತದ ಕರ್ನಾಟಕದ ಗುಲಬರ್ಗಾ ಜಿಲ್ಲೆಯಲ್ಲಿ ಪ್ರಥಮ ಆದ್ಯತೆಯಲ್ಲಿ ಅಂದಿನ ಕೇಂದ್ರ ಸರ್ಕಾರ ದೂರದರ್ಶನ ಕೇಂದ್ರವನ್ನು ಸೆಪ್ಟೆಂಬರ್ 3, 1977ರಲ್ಲಿ ಆರಂಭಿಸಿತ್ತು. ಈಗ ಅದೇ ಕೇಂದ್ರ ಸರ್ಕಾರ ದೂರದರ್ಶನ ಕೇಂದ್ರವನ್ನು ಮುಚ್ಚಲು ಹೊರಟಿರುವುದು ವಿಪರ್ಯಾಸವೇ ಸರಿ.

ಕಲ್ಯಾಣ ಕರ್ನಾಟಕವು 370(ಜೆ) ಕಲಂನಲ್ಲಿದ್ದು, ಹಿಂದುಳಿದ ಪ್ರದೇಶವಾಗಿದೆ. ಇಲ್ಲಿನ ಕಲೆ, ಕಲಾವಿದರು ಮತ್ತು ವೈಶಿಷ್ಟ್ಯವನ್ನು ಜನರಿಗೆ ತಲುಪಿಸಲು ಸರಕಾರಿ ಸ್ವಾಮ್ಯದ ದೂರದರ್ಶನದ ಅವಶ್ಯಕತೆ ಇದ್ದು, ದೂರದರ್ಶನವನ್ನು ಬಂದ್ ಮಾಡಬಾರದು ಎಂಬುದು ಕರ್ನಾಟಕ ಜಾನಪದ ಪರಿಷತ್ ಆದಿಯಾಗಿ ಹಿರಿಯ ಸಾಹಿತಿಗಳು ಮತ್ತು ಗಣ್ಯರುಗಳ ಒತ್ತಾಯವಾಗಿದೆ.

ಕಳೆದ ಹಲವು ತಿಂಗಳುಗಳಿಂದ ಒಂದೊಂದೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸುತ್ತಾ ಬಂದಿದ್ದ ಕಲಬುರಗಿ ದೂರದರ್ಶನ ಕೇಂದ್ರವು ಇತ್ತೀಚೆಗೆ ಕಾರ್ಯಕ್ರಮಗಳ ಪ್ರಸಾರವನ್ನು ನಿಲ್ಲಿಸುತ್ತಾ ಬಂದಿರುವುದು ನೋವಿನ ಸಂಗತಿಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಹಲವು ದಶಕಗಳಿಂದ ಕಲ್ಯಾಣ ಕರ್ನಾಟಕದ ಸಂಸ್ಕೃತಿ, ಕಲೆ, ಸಾಹಿತ್ಯಗಳನ್ನು ಅನಾವರಣಗೊಳಿಸುತ್ತಾ ಬಂದಿರುವ ಇತಿಹಾಸದ ಗರಿಮೆಯನ್ನು ಹೊಂದಿರುವ ಕಲಬುರಗಿ ದೂರದರ್ಶನ ಕೇಂದ್ರವನ್ನು ಸ್ಥಗಿತಗೊಳಿಸದೆ ಮುಂದುವರೆಸುವ ಬಗ್ಗೆ ಕೇಂದ್ರದ ಮೇಲೆ ಒತ್ತಡ ತರಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಉತ್ತರ :**

ಕಲಬುರಗಿ ದೂರದರ್ಶನ ಕೇಂದ್ರವು ಕೇಂದ್ರ ಸರ್ಕಾರದ ಪ್ರಸಾರ ಭಾರತಿ ಅಡಿಯಲ್ಲಿ ಕಾರ್ಯನಿರ್ವಹಿಸುವ ದೂರದರ್ಶನ ಕೇಂದ್ರವಾಗಿದೆ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುತ್ತದೆ. ಗುಲ್ಬರ್ಗಾ (ಕಲಬುರಗಿ) ದೂರದರ್ಶನ ಕೇಂದ್ರವು ಕರ್ನಾಟಕದ ಮೊದಲ ಟೆಲಿವಿಷನ್ ಕೇಂದ್ರವಾಗಿದೆ. 1977ರ ಸೆಪ್ಟೆಂಬರ್ 3ರಂದು ಕಾರ್ಯಾರಂಭ ಮಾಡಿದ್ದು, 1976–77ರಲ್ಲಿ ನಡೆದ ಉಪಗ್ರಹ ಆಧಾರಿತ ಶಿಕ್ಷಣ ಪ್ರಯೋಗ (SITE) ಯೋಜನೆಯಡಿ, ರಾಯಚೂರು, ಗುಲ್ಬರ್ಗಾ ಮತ್ತು ಬಿಜಾಪುರದಂತಹ ಗ್ರಾಮೀಣ ಪ್ರದೇಶಗಳಿಗೆ ಶಿಕ್ಷಣ ಪ್ರಸಾರ ನಡೆಸಿದ ಮೊದಲ ಕೇಂದ್ರಗಳಲ್ಲಿ ಒಂದಾಗಿದೆ.

ಕಲಬುರಗಿ ದೂರದರ್ಶನ ಕೇಂದ್ರವು ರಾಜ್ಯದಲ್ಲಿ ಇದ್ದರೂ ಅದು ಕೇಂದ್ರ ಸರ್ಕಾರದ ಪ್ರಸಾರ ಭಾರತಿ ವ್ಯಾಪ್ತಿಗೆ ಬರುತ್ತದೆ. ಈ ಕೇಂದ್ರವನ್ನು ಸ್ಥಗಿತಗೊಳಿಸುವಂತೆ ರಾಜ್ಯ ಸರ್ಕಾರವು ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಆದರೆ ಕೇಂದ್ರ ಸರ್ಕಾರವು ಈ ದೂರದರ್ಶನ ಕೇಂದ್ರವನ್ನು ಮುಚ್ಚುತ್ತಿರುವ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಾದಲ್ಲಿ, ಸ್ಥಗಿತಗೊಳಿಸದೇ, ಮುಂದುವರೆಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಕ್ರಮ ವಹಿಸಲಾಗುವುದು.

**ಕೆಸಿಐ-ಪಿಐಪಿ/224/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ